# ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

ಸಂಖ್ಯೆ: ಕವೇಕಾ-2/ಪರಿಷ್ಕರಣೆ/ಸಿಆರ್-2/2017-18

ಕಾರ್ಮಿಕ ಆಯುಕ್ತರವರ ಕಛೇರಿ,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-29, ದಿನಾಂಕ: 16-01-2018.

## : ಕಛೇರಿ ಆದೇಶ :

ವಿಷಯ: ದಿನಾಂಕ: 23-12-2017 ರಂದು ಹೊರಡಿಸಿರುವ ಅಧಿಸೂಚನೆಗೆ ಸರ್ಕಾರವು ತಂದಿರುವ ತಿದ್ದುಪಡಿಯ ಕುರಿತು ಪ್ರಚಾರ ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 39 ಎಲ್ಎಂಡಬ್ಲ್ಯೂ2017, ದಿನಾಂಕ: 23-12-2017.
2) ಸರ್ಕಾರದ ತಿದ್ದುಪಡಿ ಆದೇಶ ಕಾಇ 39 ಎಲ್ಎಂಡಬ್ಲ್ಯೂ 2017, ದಿನಾಂಕ: 30-12-2017.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ಉಲ್ಲೇಖ-1 ರಲ್ಲಿ *"ಸಿಂಕೋನಾ ರಬ್ಬರ್, ಕಾಫೀ ಟೀ ಮತ್ತು ಮಿಶ್ರ ಪ್ಲಾಂಟೇಷನ್‌ಗಳು"* ಅನುಸೂಚಿತ ಉದ್ದಿಮೆಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಹೊರಡಿಸಿರುವ ಅಂತಿಮ ಅಧಿಸೂಚನೆಗೆ ಉಲ್ಲೇಖ-2 ರಲ್ಲಿ ತಿದ್ದುಪಡಿ ಆದೇಶ ಹೊರಡಿಸಿರುರುತ್ತದೆ. ಸದರಿ ಅಧಿಸೂಚನೆಯ ಪ್ರತಿಯನ್ನು ತಮ್ಮ ಕಛೇರಿಯ ಇ-ಮೇಲ್ ವಿಳಾಸಗಳಿಗೆ ಕಳುಹಿಸಲಾಗಿದ್ದು, ಈ ಕೆಳಗೆ ಸೂಚಿಸಿದಂತೆ ಸಾರ್ವಜನಿಕರ ಗಮನಕ್ಕೆ ತರಲು ತಿಳಿಸಿದೆ;

1. ನಿಮ್ಮ ಕಾರ್ಯವ್ಯಾಪ್ತಿಯ ಸಂಬಂಧಿಸಿದ ಎಲ್ಲಾ ಉದ್ದಿಮೆಗಳಿಗೆ, ಉದ್ದಿಮೆದಾರರ ಸಂಘ ಸಂಸ್ಥೆಗಳಿಗೆ, ಕಾರ್ಮಿಕ ಸಂಘಗಳಿಗೆ, ಹಾಗೂ ಸಂಬಂಧಿಸಿದ ಇತರ ಎಲ್ಲರಿಗೂ ಈ ಅಧಿಸೂಚನೆಗಳ ಪ್ರತಿಯನ್ನು ಜಾರಿಗೊಳಿಸಿ, ಸ್ವೀಕೃತಿ ಪ್ರತಿಗಳನ್ನು ಈ ಕಛೇರಿಗೆ ತಪ್ಪದೇ ಕಳುಹಿಸಲು ನಿಮಗೆ ತಿಳಿಸಿದೆ. ಅದರೊಂದಿಗೆ ಸಂಬಂಧಿಸಿದ ಉದ್ದಿಮೆಯ ಕಾರ್ಮಿಕರ ಗಮನಕ್ಕೆ ತರಲೂ ಸಹ ತಿಳಿಸಿದೆ.
2. ಈ ಅಧಿಸೂಚನೆಗಳ ಪ್ರತಿಯನ್ನು ನಿಮ್ಮ ಹಾಗೂ ನಿಮ್ಮ ಅಧೀನದ ಎಲ್ಲಾ ಕಛೇರಿಗಳ ಸೂಚನಾಫಲಕಗಳಲ್ಲಿ ಪ್ರದರ್ಶಿಸುವಂತೆ ಸಹ ತಿಳಿಸಿದೆ.
3. ಈ ಅಧಿಸೂಚನೆಗಳ ಬಗ್ಗೆ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಿ, ಮುದ್ರಣ ಹಾಗೂ ವಿದ್ಯುನ್ಮಾನ ಸುದ್ದಿ ಮಾಧ್ಯಮಗಳಲ್ಲಿ ಪ್ರಚಾರ ನೀಡಲು ತಿಳಿಸಿದೆ.
4. ಈ ಅಧಿಸೂಚನೆಗಳ ಪ್ರತಿಯನ್ನು ತಹಸೀಲ್ದಾರರು, ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿಗಳಲ್ಲಿ ಪ್ರದರ್ಶಿಸಲು ಕ್ರಮ ವಹಿಸುವುದು.
5. ಈ ಅಧಿಸೂಚನೆಗಳನ್ನು ಹೋಬಳಿ ಮಟ್ಟದ ಕಂದಾಯ ನಿರೀಕ್ಷಕರ ಕಛೇರಿಗಳಲ್ಲಿ, ಗ್ರಾಮ ಮಟ್ಟದ ಗ್ರಾಮ ಲೆಕ್ಕಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಪ್ರದರ್ಶಿಸಲು ಸೂಚಿಸಿದೆ.

SBP 2/2/18

31/01/18



Scanned by CamScanner

6. ಈ ಅಧಿಸೂಚನೆಗಳ ಪ್ರತಿಯನ್ನು ನಿಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಪ್ರದರ್ಶಿಸಲು ತಿಳಿಸಿದೆ.
7. ಈ ಅಧಿಸೂಚನೆಗಳ ಪ್ರತಿಯನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸ್ಥಳೀಯ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಚೇರಿಗಳಿಗೆ ಕಳುಹಿಸಿ, ಅವರುಗಳ ಮೂಲಕ ವ್ಯಾಪಕ ಪ್ರಚಾರಕ್ಕೆ ಕ್ರಮ ಕೈಗೊಳ್ಳಲು ಸೂಚಿಸಿದೆ.
8. ಈ ಅಧಿಸೂಚನೆಗಳನ್ನು ವೃತ್ತಿಪರ ಹಾಗೂ ಅಧಿಕೃತವಾದ ಸಾಮಾಜಿಕ ಮಾಧ್ಯಮ (Social Media) ಗಳ ಮೂಲಕ ಸಂಬಂಧಿಸಿದವರ ಗಮನಕ್ಕೆ ತರಲು ತಿಳಿಸಿದೆ.

ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ಕೈಗೊಂಡು, ಕ್ರಮ ಕೈಗೊಂಡ ವರದಿಯನ್ನು ಹದಿನೈದು (15) ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

Chaitra V 31/01/18

ಕಾರ್ಮಿಕ ಆಯುಕ್ತರು

**ಇವರಿಗೆ:**

1. ಎಲ್ಲಾ ಕಾರ್ಮಿಕ ಅಧಿಕಾರಿಗಳು- ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ನಿರೀಕ್ಷಕರುಗಳಿಗೆ ಪ್ರತಿಗಳನ್ನು ತಲುಪಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದು.
2. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು.
3. ಎಲ್ಲಾ ಉಪ ಕಾರ್ಮಿಕ ಆಯುಕ್ತರು.
4. ಉಪ ಕಾರ್ಮಿಕ ಆಯುಕ್ತರು (ಪ್ರಚಾರ ಮತ್ತು ಅಂಕಿ ಅಂಶ) ಬೆಂಗಳೂರು- ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ಜಂಟಿ ಕಾರ್ಮಿಕ ಆಯುಕ್ತರು (ಕನಿಷ್ಠ ವೇತನ) ಬೆಂಗಳೂರು
6. ಅಪರ ಕಾರ್ಮಿಕ ಆಯುಕ್ತರು (ಆಡಳಿತ) ಬೆಂಗಳೂರು ಇವರ ಮಾಹಿತಿಗಾಗಿ
7. ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ) ಬೆಂಗಳೂರು



Scanned by CamScanner

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 39 ಎಲ್‌ಎಂಡಬ್ಲ್ಯೂ2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 30-12-2017.

## ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 39 ಎಲ್‌ಎಂಡಬ್ಲ್ಯೂ 2017, ದಿನಾಂಕ: 23-12-2017ರಲ್ಲಿ, *"ಸಿಂಕೋನಾ ರಬ್ಬರ್, ಕಾಫೀ ಟೀ ಮತ್ತು ಮಿಶ್ರ ಪ್ಲಾಂಟೇಷನ್‌ಗಳು (ಸ್ಟಾಫ್)"* ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ *" ಈ ಅಧಿಸೂಚನೆಯು ದಿನಾಂಕ: 01-10-2017ರಿಂದ ಅನ್ವಯವಾಗುತ್ತದೆ"* ಎಂದು ಇರುವುದನ್ನು *"ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುತ್ತದೆ"* ಎಂದು ಹಾಗೂ *ಸದರಿ ಅಧಿಸೂಚನೆಯ 3ನೇ ಪ್ಯಾರಾದ 6ನೇ ಸಾಲಿನಲ್ಲಿ (ನಾನ್ ಸ್ಟಾಫ್ ) ಎಂಬುವುದರ ಬದಲಿಗೆ (ಸ್ಟಾಫ್)* ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30-12-2017

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

3/1/2018

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ, ಈ ತಿದ್ದುಪಡಿ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.(ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.(ಕಾರ್ಮಿಕ ಆಯುಕ್ತರ ಮೂಲಕ)
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಛೇರಿ, ಕಾರ್ಮಿಕ ಭವನ, ಬೆಂಗಳೂರು,
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

Scanned by CamScanner